## ದುಬಾರಿ ಚಿಕಿತ್ಸೆ

ದಂತ ಚಿಕಿತ್ಸೆಗಳು ದುಬಾರಿಯಾಗಲು ಕಾರಣ ದಂತವೈದ್ಯರು ತಮ್ಮ ಚಿಕಿತ್ಸಾಲಯವನ್ನು ಅಣಿಗೊಣಿಸಲು ಹಣ ಹೂಡಿರುತ್ತಾರೆ. ಪ್ರತಿ ಚಿಕಿತ್ಸೆಗೆ ಬೇಕಾದ ಉಪಕರಣಗಳನ್ನು ಮತ್ತು ವಸ್ತುಗಳನ್ನು ಕೊಂಡುಕೊಳ್ಳಬೇಕಾದ ಅಗತ್ಯವಿರುತ್ತದೆ. ಜೊತೆಗೆ ಹಲವು ತಂತ್ರಜ್ಞರಿಗೆ ಚಿಕಿತ್ಸೆಗೆ ತಕ್ಕ ಹಾಗೆ ಹಣವನ್ನು ದಂತವೈದ್ಯರು ಸಂದಾಯ ಮಾಡಬೇಕಿರುತ್ತದೆ. ಹಾಗಾಗಿ ದಂತ ವೈದ್ಯಕೀಯ ಚಿಕಿತ್ಸೆಗಳು ದುಬಾರಿಯಾಗುತ್ತವೆ. ಉಚಿತವಾಗಿ ಅಥವಾ ಕಡಿಮೆ ಬೆಲೆಯಲ್ಲಿ ಚಿಕಿತ್ಸೆ ನೀಡುವ ಸರ್ಕಾರೀ ದಂತ ವೈದ್ಯರು ಎಲ್ಲೆಡೆ ಇರುವುದಿಲ್ಲ. ಜೊತೆಗೆ ಎಲ್ಲ ಚಿಕಿತ್ಸೆಗಳನ್ನು ನೀಡುವ ಪರಿಣತಿಯನ್ನು ಇಂತವರು ಗಳಿಸದೇ ಇರಬಹುದು.

ಹಣಕಾಸಿನ ಹಿಂಜರಿಕೆಯನ್ನು ಹೊರತುಪಡಿಸಿ ಹಲವರನ್ನು ಕಾಡುವ ಮತ್ತೊಂದು ಹಿಂಜರಿಕೆಯೆಂದರೆ 'ನೋವಿನ ಭಯ'. ಪ್ರಾಣ ಉಳಿಸುವ ಶಸ್ತ್ರಚಿಕಿತ್ಸೆಗಳಾದರೆ ಅನಿವಾರ್ಯವಾಗಿ ಇಂಜೆಕ್ಷನ್ ತೆಗೆದುಕೊಳ್ಳುಲು ಅಥವಾ ಸರ್ಜರಿ ಮಾಡಿಸಿಕೊಳ್ಳಲು ತಯಾರಾಗುವ ಜನರು ಬಾಯಲ್ಲಿ ಮಾತ್ರ ನೋವನ್ನು ಅನುಭವಿಸಲು ಹಿಂಜರಿಯುತ್ತಾರೆ. ಊಟತಿಂಡಿ ಮಾಡಲು ಮತ್ತು ಮಾತನಾಡಲು ಮತ್ತು ಮುಖದ ಅಂದಕ್ಕೆ ಧಕ್ಕೆಯಾಗುತ್ತದೆ ಎನ್ನುವ ಕಾರಣಗಳೂ ಇರುತ್ತವೆ. ಇಡೀ ಕೈ ಮೇಲೆಲ್ಲ ಸಾವಿರಾರು ಸೂಜಿಗಳಿಂದ ಚುಚ್ಚಿಸಿಕೊಂಡು ಹಚ್ಚೆ ಹಾಕಿಸಿಕೊಳ್ಳುವ ಧೈರ್ಯವಂತರು, ಗಟ್ಟಿಗರು ಕೂಡ ದಂತವೈದ್ಯರ ಬಳಿ ಬರಲು ತರ ತರನೆ ನಡುಗುವುದು ನಿಜ. ಹಾಗಾಗಿ ಪೋಲಿಸರು, ಫೈರ್ ಫೈಟರ್‌ಗಳು, ಕುಸ್ತಿಪಟುಗಳು ಕೂಡ ದಂತ ವೈದ್ಯರ ಕುರ್ಚಿಯಲ್ಲಿ ಹೆದರಿಕೆಯಿಂದ ಮೂರ್ಛೆ ಹೋಗಬಲ್ಲರು. ದಂತಚಿಕಿತ್ಸೆಯಲ್ಲಿ ನಿಜಕ್ಕೂ ನೋವಿನ ಪ್ರಮಾಣ ಅತಿ ಕಡಿಮೆ. ಆದರೆ ಬಾಯಿ ಎನ್ನುವುದು ಬಹಳ ಸೂಕ್ಷ್ಮ ಭಾಗ. ಬಾಯಿ ತೆರೆದ ಕೂಡಲೆ ತಾವು ಉಸಿರನ್ನೇ ಆಡಲು ಸಾಧ್ಯವಿಲ್ಲವೆಂದು ಕೆಲವರು ಆತಂಕಪಡುತ್ತಾರೆ. ಬೇರೆಯವರ ಕೈಗಳು ಅವರ ಬಾಯಲ್ಲಿ ಕೆಲಸ ಮಾಡುವುದರ ಬಗ್ಗೆ ಇವರಿಗೆ ಆತಂಕವಿರುತ್ತದೆ. ಇನ್ನು ಮೆಷಿನರಿಗಳನ್ನು ಬಾಯಲ್ಲಿ ಉಪಯೋಗಿಸಬೇಕೆಂದರೆ ಇಂತವರನ್ನು ಹರಸಾಹಸ ಮಾಡಿ ಒಪ್ಪಿಸಬೇಕಾಗುತ್ತದೆ. ಏನೋ ಆಗಿಬಿಡುತ್ತದೆ ಎಂದು ಸುಳ್ಳು ಸುಳ್ಳೇ ಕಲ್ಪನೆಗಳಲ್ಲಿ ಇವರು ಆತಂಕಕ್ಕೆ ಒಳಗಾಗುತ್ತಾರೆ. ಮತ್ತೆ ಕೆಲವರ ಆತಂಕಕ್ಕೆ ಮುಖ್ಯ ಕಾರಣ ಅವರಿಗೆ ಹಿಂದೆದ್ದೋ ಆಗಿದ್ದ ಒಂದು ಕೆಟ್ಟ ಅನುಭವದ ನೆನಪಾಗಿರುತ್ತದೆ. ಅದರಲ್ಲೂ ಮಕ್ಕಳಾಗಿರುವಾಗ ಯಾರಾದರೂ ದಂತವೈದ್ಯರು ಇವರಿಗೆ ಚಿಕಿತ್ಸೆ ನೀಡುವಾಗ ನೋವು ಮಾಡಿದ್ದರೆ ಅದೇ ಆತಂಕ ಇವರ ಮನಸ್ಸಿನಲ್ಲಿ ಭದ್ರವಾಗಿ ಗೂಡು ಮಾಡಿಬಿಟ್ಟಿರುತ್ತದೆ.

ನೋವು ಬಂದು, ಮುಖ ಊದಿಕೊಂಡರೂ ಇಂತವರಿಗೆ ದಂತವೈದ್ಯರ ಬಳಿ ಹೋಗಲು ಹಿಂಜರಿಕೆಯಿರುತ್ತದೆ.

ಇಂತಹ ಹಿಂಜರಿಕೆಯ ಕಾರಣ ಇವರು ದಂತವೈದ್ಯರನ್ನು ದೂರವಿಡುತ್ತಾರೆ. ಇದೇ ಕಾರಣಕ್ಕೆ ಸಣ್ಣ ಪುಟ್ಟ ದಂತ ಸಮಸ್ಯೆಗಳು ದೊಡ್ಡದಾಗಿ ತೊಂದರೆಯ ಕೊನೆಯ ಹಂತವನ್ನು ತಲುಪಿರುತ್ತವೆ. ಕೊನೆಗೆ ಯಮಯಾತನೆಯನ್ನು ತಡೆಯಲಾಗದೆ ದಂತ ವೈದ್ಯರ ಬಳಿ ಬರುತ್ತಾರೆ, ನೋವಿನ ಬಗ್ಗೆ ಮತ್ತೆ ಆತಂಕಕೊಳಗಾಗುತ್ತಾರೆ! ಎಷ್ಟೋ ಬಾರಿ, ಇಂತವರಿಗೆ ಅರೆ ಬರೆ ಅರಿವಳಿಕೆ ಅಥವಾ ಮತ್ತಿನ (ಸೆಡೇಷನ್) ಅರಿವಳಿಕೆ ನೀಡಿ ಅವರ ಆತಂಕವನ್ನು ಶಮನಗೊಳಿಸಿ ನಂತರ ಬಾಯನ್ನು ಬಿಡಿಸಬೇಕಾಗುತ್ತದೆ. ಇಲ್ಲದಿದ್ದಲ್ಲಿ ಇಂತವರು ಭಯದಿಂದ ಬಾಯನ್ನೇ ತೆರೆಯುವುದಿಲ್ಲ. ಇಂತವರು ಚಿಕಿತ್ಸೆಗೆ ಬಂದಾಗ ಅವರ ರಕ್ತದೊತ್ತಡ ಸೂರನ್ನು ಮೀರಿ ಮೇಲೇರಿರುತ್ತದೆ. ಹಲವರಿಗೆ ತಮ್ಮ ಸ್ಥಿತಿಯನ್ನು ನೋಡಿ ನಾಚಿಕೆಯಾದರೂ, ಅಳುಬಂದರೂ ಭಯವನ್ನು ನಿಗ್ರಹಿಸಲಾಗುವುದಿಲ್ಲ. ಇಂತವರಿಗೆ ಸೆಡೇಷನ್ ಕೊಟ್ಟು ಚಿಕಿತ್ಸೆ ಮಾಡಿ, ನಿಧಾನಕ್ಕೆ ಆತ್ಮ ವಿಶ್ವಾಸವನ್ನುತುಂಬಿ, ನಂಬಿಕೆ ಗಳಿಸಿದರೆ, ಇವರ ಭಯವನ್ನು ಹೋಗಲಾಡಿಸಬಹುದು. ಇದು ಅತಿ ಆತಂಕದ ಮಾನಸಿಕ ಸಮಸ್ಯೆಯಾಗಿರುವುದರಿಂದ ಬಲವಂತ ಮಾಡಿ ಚಿಕಿತ್ಸೆ ನೀಡಿದರೆ ತಪ್ಪಾಗುತ್ತದೆ.

ದಂತಚಿಕಿತ್ಸೆಯ ಬಗ್ಗೆ ಹಲವು ಮೂಢನಂಬಿಕೆಗಳೂ ಸೇರಿವೆ. ಹಲವರು ಹಲ್ಲನ್ನು ಕೀಳಿಸಿಕೊಂದರೆ ದೃಷ್ಟಿ ಕಳೆದುಕೊಳ್ಳುತ್ತೇವೆಂದು ನಂಬುತ್ತಾರೆ. ಇದು ಪೂರ್ತಿ ಸುಳ್ಳು ಮತ್ತು ತಪ್ಪು ನಂಬಿಕೆ. ಹಲ್ಲಿಗೂ, ಕಣ್ಣಿಗೂ ಯಾವುದೇ ನೇರ ಸಂಬಂಧವಿಲ್ಲ. ಹಲ್ಲನ್ನು ಕೀಳಿಸಿಕೊಂಡರೆ ಕಣ್ಣಿನ ದೃಷ್ಟಿಗೆ ಯಾವುದೇ ರೀತಿಯ ಹಾನಿಯಾಗುವುದಿಲ್ಲ.

ಹಲ್ಲನ್ನು ಸ್ವಚ್ಛಗೊಳಿಸಿಕೊಂಡರೆ ಹಲ್ಲುಗಳು ಅಲುಗಾಡಿ, ಉದುರಿ ಹೋಗುತ್ತವೆ ಎನ್ನುವ ಮತ್ತೊಂದು ಮೂಢನಂಬಿಕೆ ಜನರಲ್ಲಿದೆ. ಇದು ಖಂಡಿತ ಸುಳ್ಳು. ಹಲ್ಲಿನ ಮೇಲೆ ಬೆಳೆಯುವ ಗಾರೆಯಂತಹ ಪದರವನ್ನು, ಕಿಟ್ಟವನ್ನು ದಂತ ವೈದ್ಯರ ಬಳಿ ಹೋಗಿ ತೆಗೆಸಿಕೊಂಡಲ್ಲಿ ಹಲ್ಲಿನ ಮೇಲ್ಪದರಗಳು ಶುಚಿಯಾಗುತ್ತವೆ. ಸುತ್ತಲಿನ ವಸಡುಗಳಿಗೆ ಸೂಕ್ಷ್ಮಾಣು ಜೀವಿಗಳ ಕಿರಿ ಕಿರಿ ಕಡಿಮೆಯಾಗಿ ವಸಡುಗಳಿಂದ ರಕ್ತಸ್ರಾವವಾಗುವುದು ಕ್ರಮೇಣ ನಿಲ್ಲುತ್ತದೆ.

**ಸಾಮಾನ್ಯವಾಗಿ ಎಲ್ಲ ವಯೋಮಾನದವರನ್ನು ಕಾಡುವ ಸಮಸ್ಯೆ ಹಲ್ಲಿನದ್ದು. ದಂತ ಚಿಕಿತ್ಸೆ ಪಡೆಯಲು ಹಿಂಜರಿಯುವುದು ಸಮಸ್ಯೆ ತೀವ್ರಗೊಳ್ಳಲು ಕಾರಣ. ದಿನಕ್ಕೆ ಎರಡು ಬಾರಿ ಹಲ್ಲು ಉಜ್ಜಿ ಸ್ವಚ್ಛವಾಗಿ ಇಟ್ಟುಕೊಂಡರೆ ದಂತಕುಳಿ ಸೇರಿದಂತೆ ಇತರ ಸಮಸ್ಯೆಗಳು ಬಾಧಿಸದು. ಹಲ್ಲು ಹುಳುಕಾಗಲು ಕಾರಣಗಳು ಹಲವಾರು.**

ಬಾಯಿಯ ದುರ್ವಾಸನೆಯೂ ಕಡಿಮೆಯಾಗುತ್ತದೆ. ಎಷ್ಟೋ ಬಾರಿ ಹಲ್ಲಿನ ಮೇಲೆ ಅದೆಷ್ಟು ಕಿಟ್ಟ ಕಟ್ಟಿರುತ್ತದೆಯೆಂದರೆ ಅದು ವಸಡು ಮತ್ತು ದವಡೆಯ ಮೂಳೆಗಳನ್ನು ನಾಶ ಮಾಡಿ ತಾನೇ ಹಲ್ಲಿನ ಸುತ್ತ ಬೆಳೆದುನಿಂತಿರುತ್ತದೆ. ಹಾಗಾಗಿ ಇದನ್ನು ಕ್ಲೀನ್ ಮಾಡಿಸಿಕೊಂಡಾಗ ಆಗಾಗಲೇ ಅಲುಗಾಡುವ ಹಂತಕ್ಕೆ ಬಂದಿರುವ ಹಲ್ಲುಗಳ ರೋಗಗ್ರಸ್ತ ಸ್ಥಿತಿ ಗೊತ್ತಾಗುತ್ತದೆ ಅಷ್ಟೆ.

ಇದೇ ರೀತಿ ಹುಳುಕು ಹಲ್ಲಿಗೆ ಕಾರಣವಾಗುವ ಹುಳುಗಳು ಸಾಯುವಂತಹ ನಾಟಿ ಔಷಧಿಯನ್ನು ಮಾಡಿಸಿಕೊಳ್ಳುವ ಪರಿಪಾಟವೂ ನಡೆಯುತ್ತದೆ. ಹಲ್ಲನ್ನು ಕೊರೆದು ನಾಶ ಮಾಡುವುದು ಬರಿಗಣ್ಣಿಗೆ ಕಾಣದ ಅತಿ ಸಣ್ಣ ಬ್ಯಾಕ್ಟೀರಿಯಾಗಳು. ಹುಳುಗಳಲ್ಲ. ಬ್ಯಾಕ್ಟೀರಿಯಾಗಳನ್ನು ಸೂಕ್ಷ್ಮದರ್ಶಕ ಯಂತ್ರದಲ್ಲಿ ಮಾತ್ರ ನೋಡಲು ಸಾಧ್ಯ. ಬಾಯಲ್ಲಿ ಇಂತಹ ನೂರಾರು ಬಗೆಯ ಬ್ಯಾಕ್ಟೀರಿಯಾಗಲು ಸದಾ ಇದ್ದೇ ಇರುತ್ತವೆ. ಇವುಗಳಲ್ಲಿ ಕೆಲವು ನಮಗೆ ಒಳ್ಳೆಯದನ್ನೂ ಮಾಡಬಲ್ಲವು. ಇವೆಲ್ಲವನ್ನೂ ಒಟ್ಟಿಗೆ ಸಾಯುವಂತೆ ಔಷಧಿಯನ್ನು ನೀಡುವುದು ಯಾರಿಗೂ ಸಾಧ್ಯವಿಲ್ಲ.

ಹಲ್ಲು ಕುಳಿಬಿದ್ದು ನೋವು ಕೊಡುತ್ತಿದ್ದಲ್ಲಿ ತಂಬಾಕನ್ನು ಆ ಸಂದಿಗೆ ತುರುಕಿದರೆ ವಾಸಿಯಾಗುತ್ತದೆ ಎನ್ನುವ ಕೆಲವು ನಂಬಿಕೆಗಳಿವೆ. ತಂಬಾಕಿನ ಕೆಲವು ಮತ್ತಿನ ಗುಣಗಳಿಂದ ನೋವು ಅಲ್ಪ ಸ್ವಲ್ಪ ಕಡಿಮೆಯಾದರೂ ಇದರಿಂದ ಸಮಸ್ಯೆ ಪರಿಹಾರವಾಗುವುದಿಲ್ಲ. ಪರಿಣಿತ ವೈದ್ಯರ ಬಳಿ ಹೋಗಿ ಚಿಕಿತ್ಸೆ ಮಾಡಿಸಿಕೊಳ್ಳುವುದು ಉತ್ತಮ. ಇದರಂತೆಯೇ ಲವಂಗದೆಣ್ಣೆ, ನೀಲಗಿರಿ ತೈಲಗಳು ಕೂಡ ತಾತ್ಕಾಲಿಕವಾಗಿ ನೋವು ಕಡಿಮೆ ಮಾಡಬಹುದು. ಆದರೆ ಚಿಕಿತ್ಸೆಯಿಲ್ಲದೆ ಸಮಸ್ಯೆ ಪರಿಹಾರವಾಗುವುದಿಲ್ಲ.

ಕೆಲವರಿಗೆ ಹಲ್ಲಿನ ಆರೋಗ್ಯದ ಬಗ್ಗೆ ಬಹಳ ಕಾಳಜಿಯಿರುತ್ತದೆ. ಇವರು ತಮ್ಮ ಹಲ್ಲುಗಳನ್ನು ಜೋರಾಗಿ ಒತ್ತಿ ಒತ್ತಿ ತಿಕ್ಕುತ್ತಾರೆ. ಇದೇ ತಮ್ಮ ಬಾಯಿಯ ಆರೋಗ್ಯಕ್ಕೆ ಸೂತ್ರ ಎಂದುಕೊಳ್ಳುತ್ತಾರೆ. ನಿಯಮಿತವಾಗಿ ಎರಡು ನಿಮಿಷಗಳ ಕಾಲ, ದಿನಕ್ಕೆರಡು ಬಾರಿ ಲಘುವಾಗಿ ಹಲ್ಲುಜ್ಜುವುದು ಮುಖ್ಯ. ಜೊತೆಗೆ ಡೆಂಟಲ್ ಫ್ಲಾಸ್ ಅನ್ನು ಕೂಡ ಬಳಸಬೇಕು. ಆದರೆ ಒತ್ತಿ ಒತ್ತಿ ಉಜ್ಜುವುದು ಹಲ್ಲುಗಳಿಗೆ ಹಾನಿಕಾರಕ. ಇದರಿಂದ ಹಲ್ಲುಗಳ ಸವೆತ ಉಂಟಾಗಿ ಅತಿ ಸಂವೇದನೆಯ ತೊಂದರೆಗಳು ಕಾಣಿಸಿಕೊಳ್ಳಬಹುದು. ■